ಭವಿಷ್ಯದಲ್ಲಿ ಏನಿರುತ್ತದೆಯೋ ಯಾರು ಬಲ್ಲ? ತನ್ನನ್ನೇ ನಂಬಿಕೊಂಡು ಬೀದಿಗೆ ಬೀಳುವಂತಾಗಬಾರದಲ್ಲ? ಅರೆಮನಸ್ಸಿನಿಂದಲೇ ಪದ್ದಯ್ಯ ಮಡದಿ, ಮಗಳ ಮಾತಿಗೆ ಸಮ್ಮತಿಯ ಮುದ್ರೆ ಒತ್ತಿದ್ದರು.

★★★

ಪದ್ದಯ್ಯನಿಗ ಈಗ ಕಡಿಮೆ ವಯಸ್ಸೇನಲ್ಲ. ಅರವತ್ತೈದರ ಹತ್ತಿರ ಅನ್ನುವುದು ಒಂದು ಅಂದಾಜು. ಆದರೆ ವಯಸ್ಸಾಯಿತು ಎನ್ನುವ ನೆಪದಲ್ಲಿ ಮೂಲೆ ಹಿಡಿದು ಕೂರುವ ಪರಿಸ್ಥಿತಿ ಇಲ್ಲ. ಜಾಯಮಾನವೂ ಅಲ್ಲ. ಇಷ್ಟಕ್ಕೂ ವಯಸ್ಸು ಅಂದರೆ ಏನು? ಲೆಕ್ಕ ಹಾಕುವುದಕ್ಕೆ ಒಂದು ವ್ಯವಸ್ಥೆ. ಆಗಿದೆ ಅಂದುಕೊಂಡರೆ ಆಗಿದೆ. ಇಲ್ಲ ಅಂದುಕೊಂಡು ಗಣನೆಗೆ ತೆಗೆದುಕೊಳ್ಳದಿದ್ದರೆ ಇಲ್ಲ. ಅವರ ಕೈಕೆಳಗೆ ಚೆನ್ನಾಗಿ ನುರುಪಡಿಯಾಗಿದ್ದಾರೆ ಹೆಂಡತಿ, ಮಗಳು. ಮೈಕೈ ನೋವಾಗುವಂತಾ ಕೆಲಸಗಳಿದ್ದರೆ ಪದ್ದಯ್ಯನ ಕೈಯಿಂದ ಕಸಿದುಕೊಂಡು ತಾವೇ ಮಾಡುತ್ತಾರೆ. ಉಪ್ಪು, ಹುಳಿ, ಖಾರ ಹಾಕುವ ಯಜಮಾನಿಕೆ, ಭಕ್ಷ್ಯ ಮಾಡುವ ಜವಾಬ್ದಾರಿ ಪದ್ದಯ್ಯನಿಗೆ ಮೀಸಲು. ಅವನ್ನೂ ತಾನು ಮಾಡಬಲ್ಲೆ ಎನ್ನುವ ಆತ್ಮವಿಶ್ವಾಸ ಮಾಲಕ್ಷ್ಮಿಯಲ್ಲಿ ತುಂಬಿ ತುಳುಕುವಷ್ಟಿದೆ. ಆದರೆ ಪದ್ದಯ್ಯನಿಗೆ ಅಪನಂಬಿಕೆ. 'ತಡಿ, ತಡಿ...' ಎನ್ನುತ್ತಾ ಮಗಳ ಕೈಗೆ ಬೂಂದಿ ಕರಿಯುವ ಜಾಲರಿಸೌಟು ಹಿಡಿಸುವ ದಿನವನ್ನು ಮುಂದುಮುಂದಕ್ಕೆ ಹಾಕುತ್ತಿದ್ದಾರೆ ಪದ್ದಯ್ಯ. ಮೂವರ ದುಡಿಮೆಯ ಹಣ ಪುಟ್ಟದೊಂದು ಗಂಟಾಗಿ ಬ್ಯಾಂಕಿನಲ್ಲಿ ಜಮಾವಣೆಯಾಗಿರುವ, ಆಗುತ್ತಿರುವ ಕುರಿತು ಪದ್ದಯ್ಯನಿಗೆ ಕಿಂಚಿತ್ ಸಮಾಧಾನ. 'ಹುಟ್ಟಿಸಿದ ದೇವರು ಹುಲ್ಲು ಮೇಯಿಸುವುದಿಲ್ಲ' ಎನ್ನುವ ನೆಮ್ಮದಿ. 'ದುಡ್ಡಿಲ್ಲ, ಕಾಸಿಲ್ಲ. ಹೆಸರು ಮಹಾಲಕ್ಷ್ಮಿ' ಎಂದು ಜನ ನೆಗಾಡುವುದನ್ನು ತಪ್ಪಿಸಬೇಕು ಎನ್ನುವುದು ಅವರು ಸದಾ ಕನವರಿಸುತ್ತಿದ್ದ ಹಾರೈಕೆ.

★★★

ಮಗಳು ನೇತ್ರನ ಬಾಣಂತನಕ್ಕೆ ಬೆಂಗಳೂರುಪೇಟೆಗೆ ಹೊರಟು ನಿಂತ ಮೀನಾಕ್ಷಿ ಗಂಡನ ಊಟ, ತಿಂಡಿಗಳ ವಿಚಾರಕ್ಕೆ ನೆಚ್ಚಿಕೊಂಡಿದ್ದು ಇದೇ ಪದ್ದಯ್ಯನನ್ನು. ಅವರನ್ನು ಕರೆಸಿ ಹೇಳಬೇಕಾದ ಹದ ಹೇಳಿ ನಿಶ್ಚಿಂತಳಾಗಿದ್ದಳು ಮೀನಾಕ್ಷಿ. ಬೇರೆ ಎಲ್ಲಿಂದಲಾದರೂ ಕರೆ ಬಂದರೆ ಬೆಳಗಾಮುಂಚೆ ಬಂದು ಜನಾರ್ದನನ ಯೋಗಕ್ಷೇಮದ ನಿಗಾ ವಹಿಸಿ ನಂತರ ಅವರು ಬೇಕಾದಲ್ಲಿಗೆ ಹೋಗಬಹುದು ಎನ್ನುವ ಅವಳ ಆಣತಿಗೆ ಸಮ್ಮತಿಸೂಚಕವಾಗಿ ತಲೆ ಆಡಿಸಿದ್ದರು ಪದ್ದಯ್ಯ. ಈ ಮನೆಯವರ ಕೊಡುಗೈ ಕುರಿತು ಅವರು ಯಾವಾಗಲೂ ಋಣಿ.

"ಹೋಗ್ಬನ್ನಿ ಮೀನಾಕ್ಷಮ್ಮ. ನಾನಿದೀನಲ್ಲ..." ಎನ್ನುವ ಆಶ್ವಾಸನೆಯನ್ನು ಪದ್ದಯ್ಯನಿಂದ ಪಡೆದುಕೊಂಡು ಗೆಲುವಾದ ಮೀನಾಕ್ಷಿ ಅವರ ಬೆನ್ನ ಹಿಂದೆ ಗಂಡನಿಗೆ ಕಿವಿಮಾತು ಹೇಳಿದ್ದಳು,

"ಅಪ್ಪನ ಬದಲು ಮಗಳು ಬರ್ತೀನೀಂದ್ರೆ ಕೋಲೇಬಸವನ ಹಂಗೆ ತಲೆ ಕುಣಿಸಿಬಿಡ್ಬೇಡಿ ಮಾರಾಯ್ರೇ. ಖುದ್ದು ಬರ್ಬೇಕು ಅನ್ನಿ. ಸುಳುಸೂಕ್ಷ್ಮ ಗೊತ್ತಾಗುತ್ತೆ ಮುದುಕಂಗೆ..."

ಹೆಂಡತಿಯ ಮುನ್ನೆಚ್ಚರಿಕೆ ಕಂಡು ಜನಾರ್ದನನಿಗೆ ನಗು.

"ಅಲ್ವೇ, ಅಪ್ಪನಿಗಿಂತಾ ಮಗಳೇ ಚೆನ್ನಾಗಿ ಅಡುಗೆ ಮಾಡ್ತಾಳಂತೆ. ಹಂಗಂತ ಜನ ಮಾತಾಡ್ಕಂತಾರೆ..." ಕೆಣಕಿದ್ದ.

"ಸಿಟ್ಟು ಬರಿಸ್ಬೇಡಿ ನಂಗೆ" ಅಂದಿದ್ದಳು ಮೀನಾಕ್ಷಿ. 'ಹೇಳಿ ಮುಗಿಯುವುದೇ ಇಲ್ಲ' ಎನ್ನುವಷ್ಟು ಸರಕು ಅವಳಿಗೆ ಹೇಳುವುದಿರುತ್ತಿತ್ತು. ನೆನಪು ಮಾಡಿಕೊಂಡು, ಮಾಡಿಕೊಂಡು